# BLDE (DEEMED TO BE UNIVERSITY)
## I SEMESTER 3 Year LL.B EXAMINATION, MARCH – 2025
### Constitutional Law I
### QP CODE: 111

**Duration: 3 Hours** **Max. Marks: 80**

## Instructions to the Candidates:

- Answers should be written either in English or Kannada completely.

**I. Answer any five of the following Questions.** **5X12=60**

ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.

1. Define Constitution. What are the different kinds of Constitutions?
ಸಂವಿಧಾನವನ್ನು ವ್ಯಾಖ್ಯಾನಿಸಿ. ವಿವಿಧ ಬಗೆಯ ಸಂವಿಧಾನಗಳು ಯಾವುವು ?
2. What do you mean by 'Law'? Explain the validity of pre-constitutional and post-constitutional laws.
ಕಾನೂನು ಎಂದರೇನು? ಪೂರ್ವ ಸಂವಿಧಾನಿಕ ಮತ್ತು ನಂತರದ ಸಂವಿಧಾನಿಕ ಕಾನೂನುಗಳ ಸಿಂಧುತ್ವವನ್ನು ವಿವರಿಸಿ.
3. Discuss the right to freedom of speech and expression with the help of decided cases.
ನಿರ್ಣಯಿಸಲ್ಪಟ್ಟ ಪ್ರಕರಣಗಳ ಸಹಾಯದಿಂದ 'ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ'ವನ್ನು ಚರ್ಚಿಸಿರಿ.
4. How far the ruling in Indira Sahney's case on respect of reservation in promotion is curtailed by the 77th Amendment? Explain.
ಇಂದಿರಾ ಸಾಹನಿ ಪ್ರಕರಣದ ಸೇವೆಯಲ್ಲಿನ ಬಡ್ತಿಗೆ ಮೀಸಲಾತಿ ಆದೇಶವನ್ನು 77ನೇ ತಿದ್ದುಪಡೆ ಎಷ್ಟರ ಮಟ್ಟಿಗೆ ಕಡಿತಗೊಳಿಸಿದೆ? ವಿವರಿಸಿ.
5. Explain the rights guaranteed to minorities under the Indian Constitution.
ಭಾರತ ಸಂವಿಧಾನ ಅಡಿಯಲ್ಲಿ ಖಾತ್ರಿಗೊಳಿಸಿರುವ ಅಲ್ಪಸಂಖ್ಯಾತರ ಹಕ್ಕುಗಳನ್ನು ವಿವರಿಸಿ.
6. Discuss the scope of Right to Life and personal Liberty under the Constitution.
ಸಂವಿಧಾನದಲ್ಲಿರುವ ವೈಯಕ್ತಿಕ ಸ್ವಾತಂತ್ರ್ಯದ ಹಕ್ಕಿನ ವ್ಯಾಪ್ತಿಯನ್ನು ಚರ್ಚಿಸಿ.
7. What are the Directive Principles of State Policy? Can they be enforced in the court of law?
ರಾಜ್ಯ ನಿರ್ದೇಶಕ ತತ್ವಗಳು ಯಾವವು? ಅವುಗಳನ್ನು ನ್ಯಾಯಾಲಯಗಳ ಮೂಲಕ ಜಾರಿಗೊಳಿಸಬಹುದೇ?
8. What is Judicial Review? Discuss the remedies available under Art. 32, Art. 226 and Art. 227 of the Constitution.
ನ್ಯಾಯಿಕ ವಿಮರ್ಶೆ ಎಂದರೇನು? ಸಂವಿಧಾನದ ಅನುಚ್ಛೇದ 32, 226 ಮತ್ತು 227 ರಲ್ಲಿ ಇರುವ ಪರಿಹಾರಗಳನ್ನು ಚರ್ಚಿಸಿ.

**II. Answer any two of the following Questions.** **2X10=20**

ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.

9. After due consideration and in order to provide employment opportunities to younger sections of the society, the Government, by passing Public Employment (Regulation of Conditions of Service) Act, reduced the age of requirement of all Government employees from 60 to 58 years. This was challenged as a violation of article 14 of the Constitution. Decide.
ಸಾಕಷ್ಟು ಸಮಾಲೋಚನೆಯ ನಂತರ ಮತ್ತು ಸಮಾಜದ ಕಿರಿಯ ವಿಭಾಗಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸುವ ಸಲುವಾಗಿ ಸರ್ಕಾರವು 'ಸಾರ್ವಜನಿಕ ಉದ್ಯೋಗ (ಸೇವಾನಿಯಮನಿಯಂತ್ರಣ) ಕಾಯ್ದೆ' ಜಾರಿಗೆ ತರುವ ಮೂಲಕ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 60 ರಿಂದ 58 ವರ್ಷಗಳಿಗೆ ಕಡಿಮೆ ಮಾಡಿತು. ಇದನ್ನು ಸಂವಿಧಾನದ 14ನೇ ವಿಧಿಯ ಉಲ್ಲಂಘನೆ ಎಂದು ಪ್ರಶ್ನಿಸಲಾಯಿತು. ತೀರ್ಮಾನಿಸಿ.

**10.** Authorities have refused to issue passport to 'A', a citizen of India to go abroad. Can the authorities be compelled to issue?

ಪ್ರಾಧಿಕಾರವು 'ಎ' ಎಂಬ ಭಾರತೀಯ ನಾಗರಿಕನಿಗೆ ಪಾಸ್ ಪೋರ್ಟ್ ನಿರಾಕರಿಸಿದೆ. ಪ್ರಾಧಿಕಾರವು ಅದನ್ನು ನೀಡಲೇಬೇಕೆಂದು ಒತ್ತಾಯಿಸಬಹುದೇ?

**11.** The church bell rings once in an hour round the clock in a residential area. The residents of that area claimed that it causes nuisance to them. But the church people contended that it is their religious right under the Constitution. Can they claim it as their religious right? Decide.

ಒಂದು ಚರ್ಚಿನಲ್ಲಿ ಪ್ರತಿ ಘಂಟೆಗೊಮ್ಮೆ ಘಂಟೆ ಬಾರಿಸುತ್ತಿರುತ್ತಾರೆ. ಇದರಿಂದ ಅಲ್ಲಿನ ನಿವಾಸಿಗಳಿಗೆ ಉಪದ್ರವವಾಗುತ್ತಿರುತ್ತದೆ. ಅದನ್ನು ಅಲ್ಲಿನ ನಿವಾಸಿಗಳು ಪ್ರಶ್ನಿಸುತ್ತಾರೆ. ಆದರೆ ಚರ್ಚ್ ನವರು ಇದು ತಮ್ಮ ಧಾರ್ಮಿಕ ಹಕ್ಕು ಎಂದು ಪ್ರತಿಪಾದಿಸುತ್ತಾರೆ. ಇದು ಅವರ ಧಾರ್ಮಿಕ ಹಕ್ಕೆಂದು ಅವರು ಪ್ರತಿಪಾದಿಸಬಹುದೆ? ತೀರ್ಮಾನಿಸಿ.

# BLDE (DEEMED TO BE UNIVERSITY)
## I SEMESTER of 3 Year LL.B EXAMINATION
## Constitutional Law-I
## QP CODE: 111

**Duration: 3 Hours** **Max. Marks: 80**

**Instructions to the Candidates:**

- Answers should be written either in English or Kannada completely.

**I. Answer any Five of the following Questions.** **5X12=60**
ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ

1. Explain the objectives enshrined in the preamble of the Constitution of India.
ಭಾರತ ಸಂವಿಧಾನದ ಪೀಠಿಕೆಯಲ್ಲಿ ಪ್ರತಿಪಾದಿಸಲಾದ ಉದ್ದೇಶಗಳನ್ನು ವಿವರಿಸಿ.
2. Describe the dynamic interpretation of the Right to Equality with the support of judicial decisions.
ನ್ಯಾಯಾಂಗ ನಿರ್ಧಾರಗಳ ಬೆಂಬಲದೊಂದಿಗೆ ಸಮಾನತೆಯ ಹಕ್ಕಿನ ಕ್ರಿಯಾತ್ಮಕ ವ್ಯಾಖ್ಯಾನವನ್ನು ವಿವರಿಸಿ.
3. Explain different dimensions of freedom of speech and expression in electronic era with the help of decided cases
ನಿರ್ಧರಿಸಿದ ಪ್ರಕರಣಗಳ ಸಹಾಯದಿಂದ ವಿದ್ಯುನ್ಮಾನ ಯುಗದಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ವಿವಿಧ ಆಯಾಮಗಳನ್ನು ವಿವರಿಸಿ.
4. Examine the scope of Article 21 of the Constitution of India in the period of globalisation.
ಜಾಗತೀಕರಣದ ಅವಧಿಯಲ್ಲಿ ಭಾರತದ ಸಂವಿಧಾನದ 21 ನೇ ವಿಧಿಯ ವ್ಯಾಪ್ತಿಯನ್ನು ಪರೀಕ್ಷಿಸಿ.
5. Explain the constitutional safeguards available to an accused person under the Constitution of India.
ಭಾರತದ ಸಂವಿಧಾನದ ಅಡಿಯಲ್ಲಿ ಆರೋಪಿಗೆ ಲಭ್ಯವಿರುವ ಸಾಂವಿಧಾನಿಕ ರಕ್ಷಣೆಗಳನ್ನು ವಿವರಿಸಿ.
6. "The right to freedom of religion is weapon to achieve the Secular State which is one of the objects enshrined in the Preamble of the Indian Constitution". Justify the phrase.
"ಭಾರತೀಯ ಸಂವಿಧಾನದ ಪೀಠಿಕೆಯಲ್ಲಿ ಪ್ರತಿಪಾದಿಸಲಾದ ಉದ್ದೇಶಗಳಲ್ಲಿ ಒಂದಾದ ಜಾತ್ಯತೀತ ರಾಜ್ಯವನ್ನು ಸಾಧಿಸಲು ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಒಂದು ಅಸ್ತ್ರವಾಗಿದೆ". ಈ ವಾಕ್ಯವನ್ನು ಸಮರ್ಥಿಸಿ.
7. "Directive Principles of State Policy and Fundamental Rights are means for achieving social welfare of the people" comment.
"ರಾಜ್ಯ ನೀತಿಯ ನಿರ್ದೇಶನ ತತ್ವಗಳು ಮತ್ತು ಮೂಲಭೂತ ಹಕ್ಕುಗಳು ದೇಶದ ಜನರ ಸಾಮಾಜಿಕ ಕಲ್ಯಾಣವನ್ನು ಸಾಧಿಸುವ ಸಾಧನಗಳಾಗಿವೆ" ನಿಮ್ಮ ಅಭಿಪ್ರಾಯ ತಿಳಿಸಿ.
8. Examine the constitutional remedies for the enforcement of fundamental rights under the Constitution of India.
ಭಾರತದ ಸಂವಿಧಾನದ ಅಡಿಯಲ್ಲಿ ಮೂಲಭೂತ ಹಕ್ಕುಗಳ ಜಾರಿಗಾಗಿ ಸಾಂವಿಧಾನಿಕ ಪರಿಹಾರಗಳನ್ನು ಪರೀಕ್ಷಿಸಿ.

**II. Answer any two of the following Questions.** **2X10=20**
ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.

9. 'A' and 'B' had come to India in 1938. In 1945, they went to pilgrimage to Iraq. On return, they were registered as foreigners and several times their stay in India was extended. But in 1957 there request was refused. Can they compel the Government of India to grant them citizenship?

‘ಎ’ ಮತ್ತು ‘ಬಿ’ 1938 ರಲ್ಲಿ ಭಾರತಕ್ಕೆ ಬಂದರು ಮತ್ತು 1945 ರಲ್ಲಿ ಅವರು ಇರಾಕ್‌ಗೆ ತೀರ್ಥಯಾತ್ರೆಗೆ ಹೋದರು. ಅಲ್ಲಿಂದ ಭಾರತಕ್ಕೆ ಹಿಂದಿರುಗಿದಾಗ, ಅವರನ್ನು ವಿದೇಶಿಯರಾಗಿ ನೋಂದಾಯಿಸಲಾಯಿತು ಮತ್ತು ಭಾರತದಲ್ಲಿ ಅವರ ವಾಸ್ತವ್ಯವನ್ನು ಹಲವಾರು ಬಾರಿ ವಿಸ್ತರಿಸಲಾಯಿತು. ಆದರೆ 1957 ರಲ್ಲಿ ಭಾರತದಲ್ಲಿ ಉಳಿಯಲು ಅವರ ವಿನಂತಿಯನ್ನು ನಿರಾಕರಿಸಲಾಯಿತು. ಅವರಿಗೆ ಪೌರತ್ವ ನೀಡುವಂತೆ ಭಾರತ ಸರ್ಕಾರವನ್ನು ಒತ್ತಾಯಿಸಬಹುದೇ?

10. An Atheist Society of India filed a writ of mandamus praying for a direction to the state government to prohibit breaking of coconuts, performing poojas, chanting of mantras of different religions at state functions on the ground that India is a secular state and it has nothing to do with any religion. Can it succeed?

ಭಾರತವು ಒಂದು ಜಾತ್ಯತೀತ ರಾಷ್ಟ್ರವಾಗಿದ್ದು, ಸರಕಾರಕ್ಕೂ ಹಾಗೂ ಯಾವುದೇ ಧರ್ಮಕ್ಕೂ ಯಾವುದೇ ಸಂಬಂಧವಿಲ್ಲ ಎಂಬ ಕಾರಣ ನೀಡಿ, ಸರ್ಕಾರಿ ಕಾರ್ಯಕ್ರಮಗಳಲ್ಲಿ ತೆಂಗಿನಕಾಯಿ ಒಡೆಯುವುದು, ಪೂಜೆ ಸಲ್ಲಿಸುವುದು, ವಿವಿಧ ಧರ್ಮಗಳ ಮಂತ್ರಗಳನ್ನು ಪಠಿಸುವುದನ್ನು ನಿಷೇಧಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಪ್ರಾರ್ಥಿಸಿ ಭಾರತೀಯ ನಾಸ್ತಿಕ ಸಂಘವು ಮ್ಯಾಂಡಮಸ್ ರಿಟ್ ಸಲ್ಲಿಸಿತು. ಅದು ಯಶಸ್ವಿಯಾಗಬಹುದೇ?

11. An engineering college made admissions of candidates on the basis of oral interview after a written test. As per the procedure high marks where allocated for oral test but candidates were interviewed only for two to three minutes. Suraj had got high marks in written test but low marks in oral test. He wants to challenge this. Advice Suraj.

ಒಂದು ಎಂಜಿನಿಯರಿಂಗ್ ಕಾಲೇಜು ಲಿಖಿತ ಪರೀಕ್ಷೆಯ ನಂತರ ಮೌಖಿಕ ಸಂದರ್ಶನದ ಆಧಾರದ ಮೇಲೆ ಅಭ್ಯರ್ಥಿಗಳಿಗೆ ಪ್ರವೇಶ ನೀಡಿತು. ಕಾರ್ಯವಿಧಾನದ ಪ್ರಕಾರ ಮೌಖಿಕ ಪರೀಕ್ಷೆಗೆ ಹೆಚ್ಚಿನ ಅಂಕಗಳನ್ನು ನಿಗದಿಪಡಿಸಲಾಗಿತ್ತು ಆದರೆ ಅಭ್ಯರ್ಥಿಗಳನ್ನು ಕೇವಲ ಎರಡರಿಂದ ಮೂರು ನಿಮಿಷಗಳ ಕಾಲ ಸಂದರ್ಶಿಸಲಾಯಿತು. ಸೂರಜ್ ಲಿಖಿತ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದಿದ್ದು, ಆದರೆ ಮೌಖಿಕ ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಪಡೆದಿದ್ದನು. ಅವನು ಇದನ್ನು ಪ್ರಶ್ನಿಸಲು ಬಯಸುತ್ತಾನೆ. ಸೂರಜ್‌ಗೆ ಸಲಹೆ ನೀಡಿ.

# BLDE (DEEMED TO BE UNIVERSITY)
## I SEMESTER 3 Year LL.B EXAMINATION, MARCH – 2025
### Law of Contract
### QP CODE: 112

**Duration: 3 Hours** **Max. Marks: 80**

**Instructions to the Candidates:**

- Answers should be written either in English or Kannada completely.

**I. Answer any Five of the following Questions.** **5 X12=60**
ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ

1. All contracts are agreement but all agreements are not a contract?
"ಕರಾರುಗಳೆಲ್ಲವೂ ಒಪ್ಪಂದಗಳೇ, ಆದರೆ ಒಪ್ಪಂದಗಳೆಲ್ಲವೂ ಕರಾರುಗಳಲ್ಲ". ವಿವರಿಸಿ.
2. Define consideration. What are the essentials of valid consideration?
ಪ್ರತಿಫಲವನ್ನು ವ್ಯಾಖ್ಯಾನಿಸಿರಿ. ಪ್ರತಿಫಲದ ಘಟಕಾಂಶಗಳಾವುವು ?
3. Define coercion. How does, it differ from undue influence?
"ಜುಲುಮೆ" ಎಂದರೇನು? ಇದು ಹೇಗೆ ಅನುಚಿತ ಪ್ರಭಾವದಿಂದ ಭಿನ್ನವಾಗಿದೆ ?
4. Define Contingent Contract? Explain the rules relating to contingent contract?
ಸಂಭವನೀಯ ಒಪ್ಪಂದವನ್ನು ವ್ಯಾಖ್ಯಾನಿಸಿರಿ. ಸಂಭವನೀಯ ಒಪ್ಪಂದಗಳಿಗೆ ಸಂಬಂಧಿಸಿದಂತ ನಿಯಮಗಳನ್ನು ವಿವರಿಸಿರಿ
5. Explain the doctrine of impossibility of performance of contract.
ಕರಾರಿನ ನೆರವೇರಿಕೆಯ ಅಸಾಧ್ಯತೆ ಸಿದ್ಧಾಂತವನ್ನು ವಿವರಿಸಿರಿ.
6. Explain "Ordinary damages" and "Special damages" along with decided cases.
ನಿರ್ಧರಿಸಲ್ಪಟ್ಟ ಪ್ರಕರಣಗಳೊಂದಿಗೆ "ಸಾಮಾನ್ಯ ಪರಿಹಾರಧನ" ಮತ್ತು "ವಿಶೇಷ ಪರಿಹಾರಧನ" ಗಳನ್ನು ವಿವರಿಸಿರಿ.
7. Explain the various remedies available in case of breach of contract?
ಕರಾರಿನ ಉಲ್ಲಂಘನೆಗಾಗಿ ದೊರಕುವ ವಿವಿಧ ಪರಿಹಾರಗಳಾವುವು ವಿವರಿಸಿರಿ.
8. Explain in brief the various types of specific relief that may be granted by the court under the specific relief Act.
ನಿರ್ದಿಷ್ಟ ಪರಿಹಾರ ಕಾಯಿದೆಯ ಅಡಿಯಲ್ಲಿ ನ್ಯಾಯಾಲಯವು ನೀಡಬಹುದಾದ ವಿವಿಧ ರೀತಿಯ ನಿರ್ದಿಷ್ಟ ಪರಿಹಾರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

**II. Answer any two of the following Questions.** **2X10=20**
ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ

9. 'Neha' a customer, picks up an article in a departmental store and takes it to the cash counter. Ritesh, a clerk at cash counter refuses to sell as it is only a sample, but not for sale. 'Neha' wants to institute a suit against the owner of the store for breach of contract. Advise 'Neha'.

'ನೇಹಾ ' ಎಂಬ ಒಬ್ಬ ಗ್ರಾಹಕಳು ವಿಭಾಗೀಯ ಅಂಗಡಿಯಲ್ಲಿ ಒಂದು ವಸ್ತುವನ್ನು ಆಯ್ದು ಅದನ್ನು ನಗದು ಪಾವತಿಸುವ ಸ್ಥಳಕ್ಕೆ ತೆಗೆದುಕೊಂಡು ಹೋದಳು. ನಗದು ಸ್ಥಳದ ಗುಮಾಸ್ತನಾದ ' ರಿತೇಶ್'ನು ಅದು ಕೇವಲ

ಸಮೂನೆಯಾಗಿದ್ದರಿಂದ ಮಾರಾಟಕ್ಕೆ ಇಡದ ಕಾರಣದಿಂದ ಮಾರಾಟ ಮಾಡಲು ನಿರಾಕರಿಸಿದನು. 'ನೇಹಾ' ಆ ಅಂಗಡಿಯ ಮಾಲಿಕನ ವಿರುದ್ಧ ಕರಾರಿನ ಉಲ್ಲಂಘನೆಗಾಗಿ ದಾವೆಯನ್ನು ಹೂಡಲು ಬಯಸುತ್ತಾಳೆ. 'ನೇಹಾ 'ಗೆ ಸಲಹೆಯನ್ನು ನೀಡಿರಿ.

**10.** 'A' a minor, falsely represents to 'B' that he is a major and purchases some goods on credit. 'B' files a suit to recover the price from 'A'. Decide.
'ಅ ' ಎಂಬ ಅಪ್ರಾಪ್ತ ವಯಸ್ಸಿನ ವ್ಯಕ್ತಿಯು ತಾನು ಪ್ರಾಯಸ್ತನೆಂದು 'ಬ ' ಗೆ ತಪ್ಪು ನಿರೂಪಣೆ ನೀಡಿ ಕೆಲವು ವಸ್ತುಗಳನ್ನು ಸಾಲವಾಗಿ ಪಡೆದುಕೊಂಡನು. 'ಬ' ನು ಬೆಲೆಯ ವಸೂಲಿಗಾಗಿ 'ಅ' ಮೇಲೆ ದಾವೆ ಹೂಡುವನು. ತೀರ್ಮಾನಿಸಿ.

**11.** 'Ajit' and 'Rohit' entered a wagering agreement. In the wagering agreement 'Ajit' has lost the amount of Rs. 5,000. 'Ajit' has taken loan of Rs. 5,000 from 'Vineet' to pay the amount to 'Rohit'. Can 'Vineet' recover 5,000 Rs. from 'Ajit'?
'ಅಜಿತ್' ಮತ್ತು 'ರೋಹಿತ್ ' ಒಂದು ಜೂಜು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾರೆ. ಆ ಜೂಜು ಒಡಂಬಡಿಕೆಯಲ್ಲಿ 'ಅಜಿತ್ 'ನು 5,000 ರೂ.ನ್ನು ಕಳೆದುಕೊಳ್ಳುತ್ತಾನೆ. 'ರೋಹಿತ್' ನಿಗೆ ಹಣವನ್ನು ನೀಡಲು 'ಅಜಿತ್ 'ನು 'ವಿನೀತ್' ಎಂಬವನ ಬಳಿ 5,000 ರೂ. ಸಾಲವನ್ನು ತೆಗೆದುಕೊಂಡಿರುತ್ತಾನೆ. 'ವಿನೀತ್' ನು 'ಅಜಿತ್' ನಿಂದ 5,000 ರೂ.ನ್ನು ವಸೂಲಾತಿ ಮಾಡಬಹುದೇ?

# BLDE (DEEMED TO BE UNIVERSITY)
## I SEMESTER of 3 Year LL.B EXAMINATION
## Contract-I: Law of Contract
## QP CODE: 112

**Duration: 3 Hours** **Max. Marks: 80**

**Instructions to the Candidates:**

- Answers should be written either in English or Kannada completely.

**I.** Answer any Five of the following Questions. **5X12=60**
ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.

1. Define Acceptance. Explain the Essentials of a valid Acceptance.
'ಸ್ವೀಕೃತಿಯನ್ನು' ವ್ಯಾಖ್ಯಾನಿಸಿ ಮತ್ತು ಒಂದು ಊರ್ಜಿತ ಸ್ವೀಕೃತಿಯ ಅವಶ್ಯಕತೆಗಳನ್ನು ವಿವರಿಸಿರಿ.
2. 'An agreement without consideration is void'. Discuss.
'ಪ್ರತಿಫಲವಿಲ್ಲದ ಒಪ್ಪಂದವು ಶೂನ್ಯ'. ಚರ್ಚಿಸಿರಿ.
3. Who are competent to contract? Discuss the effects of minor's agreement.
ಕರಾರು ಮಾಡಿಕೊಳ್ಳಲು ಯಾರು ಸಕ್ಷಮರು? ಅಪ್ರಾಪ್ತ ವಯಸ್ಕರು ಮಾಡಿಕೊಳ್ಳುವ ಒಪ್ಪಂದದ ಪರಿಣಾಮಗಳನ್ನು ಚರ್ಚಿಸಿರಿ.
4. Distinguish between fraud and misrepresentation.
ಮೋಸ ಮತ್ತು ತಪ್ಪು ನಿರೂಪಣೆಗಳನ್ನು ವ್ಯತ್ಯಸಿಸಿರಿ.
5. Explain the doctrine of frustration with the help of decided cases.
ನಿಷ್ಫಲತತ್ವವನ್ನು ನಿರ್ಧರಿತ ಪ್ರಕರಣಗಳ ಸಹಾಯದೊಂದಿಗೆ ವಿವರಿಸಿರಿ.
6. State the effects of anticipatory breach of contract.
ಅವಧಿಗೆ ಮೊದಲೇ ಕರಾರು ಉಲ್ಲಂಘನೆಯ ಪರಿಣಾಮಗಳನ್ನು ಹೇಳಿರಿ.
7. Briefly explain the concept of Quasi Contract by citing cases.
ಅರೆ-ಕರಾರು ಪರಿಕಲ್ಪನೆಯನ್ನು ಪ್ರಕರಣಗಳೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿರಿ.
8. What is an Injunction? Under what circumstances it can be granted and refused by the Court.
ತಡೆಯಾಜ್ಞೆ ಎಂದರೇನು? ನ್ಯಾಯಾಲಯವು ಯಾವ ಸಂದರ್ಭಗಳಲ್ಲಿ ತಡೆಯಾಜ್ಞೆಯನ್ನು ಆದೇಶಿಸುತ್ತದೆ ಹಾಗೂ ಯಾವ ಸಂದರ್ಭಗಳಲ್ಲಿ ಆದೇಶಿಸುವುದಿಲ್ಲ.

**II. Answer any two of the following Questions.** **2X10=20**
ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.

9. 'A' offers to sell the horse to 'B' for Rs. 10,000 or Rs. 12,000. 'B' agrees to purchase the horse. Advise 'B'.
'ಅ' ನು ತನ್ನ ಕುದುರೆಯನ್ನು ರೂಪಾಯಿ 10,000 ಅಥವಾ 12,000 ಗಳಿಗೆ 'ಬ' ನಿಗೆ ಮಾರಾಟ ಮಾಡಲು ಪ್ರಸ್ತಾಪಿಸುತ್ತಾನೆ. 'ಬ' ನು ಕೂಡ ಕುದುರೆಯನ್ನು ಖರೀದಿಸಲು ಸಮ್ಮತಿಸುತ್ತಾನೆ. 'ಬ' ನಿಗೆ ಸಲಹೆ ನೀಡಿರಿ.

10. 'A' supplies to the wife and children of 'B' a lunatic, with necessaries suitable to their condition of life. Discuss the validity of this contract.

'ಅ' ಎಂಬುವನು ಹುಚ್ಚನಾದ 'ಬ' ಎಂಬುವನ ಹೆಂಡತಿ ಮತ್ತು ಮಕ್ಕಳಿಗೆ ಅವರ ಜೀವನ ನಿರ್ವಹಣೆ ಪರಿಸ್ಥಿತಿಗೆ ಅನುಗುಣವಾಗಿ ಬೇಕಾದ ಅವಶ್ಯಕತೆಗಳನ್ನು ಪೂರೈಸುತ್ತಾನೆ. ಈ ಕರಾರಿನ ಊರ್ಜಿತತೆಯನ್ನು ಚರ್ಚಿಸಿರಿ.

11. A music hall was agreed to be let out on a certain day. But before that day it was destroyed by fire. Discuss the consequences.

ಒಂದು ನಿಗದಿತ ದಿನದಂದು ಒಂದು ಕಲಾಭವನವನ್ನು ಬಾಡಿಗೆಗೆ ಕೊಡಲು ಒಪ್ಪಂದವಾಗಿರುತ್ತದೆ. ಆ ದಿನದ ಮೊದಲೇ ಅದು ಬೆಂಕಿಯಿಂದ ನಾಶವಾಗುತ್ತದೆ. ಪರಿಣಾಮಗಳನ್ನು ಚರ್ಚಿಸಿರಿ.

# BLDE (DEEMED TO BE UNIVERSITY)
## I SEMESTER 3 Year LL.B EXAMINATION, MARCH – 2025
## Law of Torts
## QP CODE: 113

**Duration: 3 Hours** **Max. Marks: 80**

### Instructions to the Candidates:

- Answers should be written either in English or Kannada completely.

**I.** Answer any Five of the following Questions. **5X12=60**
ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.

1. What is tort? Explain the doctrines of injuria sine damnum and damnum sine injuria.
   ಅಪಕೃತ್ಯ ಎಂದರೇನು? ನಷ್ಟವಿಲ್ಲದ ಹಾನಿ ಮತ್ತು ಹಾನಿಯಲ್ಲದ ನಷ್ಟ ಎಂಬ ಸಿದ್ಧಾಂತಗಳನ್ನು ವಿವರಿಸಿ.
2. Discuss the relevancy of mental elements in tort.
   ಅಪಕೃತ್ಯದಲ್ಲಿ ಮಾನಸಿಕ ಘಟಕಾಂಶಗಳ ಪ್ರಸ್ತುತತೆಯನ್ನು ಚರ್ಚಿಸಿ.
3. Explain the defences of 'Act of God' and 'Inevitable Accident'.
   'ದೈವಿ ಕೃತ್ಯ' ಮತ್ತು 'ಆಕಸ್ಮಿಕ ದುರ್ಘಟನೆ' ಪ್ರತಿರಕ್ಷೆಗಳನ್ನು ವಿವರಿಸಿ.
4. Under which circumstances is the master liable for the tort committed by his servant?
   ಯಾವ ಸಂದರ್ಭಗಳಲ್ಲಿ ಸೇವಕನು ಮಾಡುವ ಅಪಕೃತ್ಯಕ್ಕೆ ಮಾಲೀಕನು ಹೊಣೆಗಾರನಾಗುತ್ತಾನೆ?
5. Explain the rule of 'Strict Liability' with exceptions.
   ಶಿಸ್ತುಬದ್ಧ ಹೊಣೆಗಾರಿಕೆಯ ನಿಯಮವನ್ನು ಅದರ ಅಪವಾದಗಳೊಂದಿಗೆ ವಿವರಿಸಿ.
6. What is nuisance? Explain the essential elements of nuisance.
   ಉಪದ್ರವ ಎಂದರೇನು? ಉಪದ್ರವದ ಅವಶ್ಯಕ ಅಂಶಗಳನ್ನು ವಿವರಿಸಿ.
7. Explain assault and battery with the help of decided cases.
   ಹಲ್ಲೆ ಮತ್ತು ಪ್ರಹಾರ ಅಪಕೃತ್ಯಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.
8. Explain the composition, powers and functions of State Commission under the Consumer Protection Act, 2019.
   ಗ್ರಾಹಕ ಸಂರಕ್ಷಣಾ ಅಧಿನಿಯಮ, 2019ರ ಅಡಿಯಲ್ಲಿ ರಾಜ್ಯ ಆಯೋಗದ ರಚನೆ, ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.

**II.** Answer any two of the following Questions. **2X10=20**
ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.

9. A school master Mr. Francis was removed from 'Royal Grammar School' unlawfully. Immediately Mr. Francis opened a rival school opposite to Royal Grammar School. All the students from Royal Grammar School joined the new school. Consequently Royal Grammar school was closed down and suffered huge loss. Now they want to take action against Mr. Franacis. Advice the Royal Grammar School authorities.

ಒಬ್ಬ ಶಿಕ್ಷಕನಾದ ಮಿ|| ಫ್ರಾನ್ಸಿಸ್ ರವರನ್ನು ಕಾನೂನುಬಾಹಿರವಾಗಿ 'ರಾಯಲ್ ಗ್ರಾಮರ್ ಸ್ಕೂಲ್' ನಿಂದ ತೆಗೆಯಲಾಯಿತು. ತಕ್ಷಣ ಮಿ|| ಫ್ರಾನ್ಸಿಸ್ ರವರು ರಾಯಲ್ ಗ್ರಾಮರ್ ಸ್ಕೂಲ್ ಎದುರೇ ಒಂದು ಪ್ರತಿ ಸ್ಪರ್ಧಿ

ಸ್ಕೂಲನ್ನು ತೆರೆಯುತ್ತಾರೆ. ರಾಯಲ್ ಗ್ರಾಮರ್ ಸ್ಕೂಲ್‌ನಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳು ಹೊಸ ಸ್ಕೂಲನ್ನು ಸೇರುತ್ತಾರೆ. ಅದರ ಪರಿಣಾಮ ರಾಯಲ್ ಗ್ರಾಮರ ಸ್ಕೂಲ್‌ನ್ನು ಮುಚ್ಚಲಾಯಿತು ಮತ್ತು ಬಹಳ ನಷ್ಟವನ್ನು ಅನುಭವಿಸುತ್ತಾರೆ. ಈಗ ಅವರು ಶಿಕ್ಷಕನಾದ ಮಿ|| ಫ್ರಾನ್ಸಿಸ್ ರವರ ಮೇಲೆ ದಾವೆ ಹೂಡಲು ನಿರ್ಧರಿಸಿದ್ದಾರೆ. ರಾಯಲ್ ಗ್ರಾಮರ್ ಸ್ಕೂಲ್ ಅಧಿಕಾರಿಗಳಿಗೆ ಸಲಹೆ ನೀಡಿರಿ.

10. 'X' played a practical joke on 'Y', telling her that her husband had lost both his legs in an accident. Hearing this 'Y' suffered nervous shock and got seriously ill. She had to incur huge expenses for treatment. Can she sue 'X' for damages? Decide.

'X' ನು ಹಾಸ್ಯ ಮಾಡುವ ಉದ್ದೇಶದಿಂದ 'Y' ಗೆ ಅವಳ ಪತಿಯು ಅಪಘಾತದಲ್ಲಿ ತನ್ನೆರಡೂ ಕಾಲುಗಳನ್ನು ಕಳೆದುಕೊಂಡಿದ್ದಾನೆಂದು ಸುಳ್ಳು ಹೇಳಿದನು. ಇದನ್ನು ಕೇಳಿ 'Y' ಳು ನರಗಳ ಆಘಾತಕ್ಕೆ ಒಳಗಾಗಿ ತೀವ್ರ ಅನಾರೋಗ್ಯಕ್ಕೆ ಒಳಗಾದಳು. ಅವಳು ಚಿಕಿತ್ಸೆಗಾಗಿ ಹೆಚ್ಚಿನ ಹಣವನ್ನು ವೆಚ್ಚ ಮಾಡಬೇಕಾಯಿತು. ಅವಳು 'X' ನ ಮೇಲೆ ಪರಿಹಾರಕ್ಕಾಗಿ ದಾವೆ ಮಾಡಬಹುದೇ? ನಿರ್ಧರಿಸಿರಿ.

11. 'X' was passing by 'Y' s house, 'Y's dog attacked 'X' and tried to bite him. 'X' took his gun and pointed it at the dog. The dog got scared and started running back. Still 'X' shot the dog and killed it. 'Y' intends to file suit against 'X' to recover damages. Advise 'Y'.

'X' ನು 'Y'ನ ಮನೆಯ ಮುಂದೆ ಹಾದು ಹೋಗುತ್ತಿದ್ದನು. 'Y'ನ ನಾಯಿ 'X'ನ ಮೇಲೆ ಆಕ್ರಮಣ ಮಾಡಿತು ಮತ್ತು ಆತನನ್ನು ಕಚ್ಚಲು ಪ್ರಯತ್ನಿಸಿತು. 'X' ನು ತನ್ನ ಬಂದೂಕನ್ನು ತೆಗೆದು ನಾಯಿ ಕಡೆ ತೋರಿಸಿದನು. ನಾಯಿಯು ಹೆದರಿ, ಹಿಂದಕ್ಕೆ ಓಡಲು ಪ್ರಾರಂಭಿಸಿತ್ತು. ಆದರೂ ಅದನ್ನು ಬಂದೂಕಿನಿಂದ ಹೊಡೆದು ಸಾಯಿಸಿದನು. 'Y' ನು 'X' ನ ವಿರುದ್ಧ ನಷ್ಟ ಪರಿಹಾರ ಪಡೆಯಲು ದಾವೆಯನ್ನು ಹಾಕಲು ಬಯಸುತ್ತಾನೆ. ಆತನಿಗೆ ಸಲಹೆ ನೀಡಿರಿ.

# BLDE (DEEMED TO BE UNIVERSITY)
## I SEMESTER 3 Year LL.B EXAMINATIONS, MARCH – 2025
## Family Law I: Hindu Law
## QP CODE : 114

**Duration: 3 Hours** **Max. Marks: 80**

### Instructions to the Candidates:

- Answers should be written either in English or Kannada completely.

**I. Answer any FIVE of the following Questions.** **5 X 12 = 60**
ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.

1. Explain ancient sources of Hindu law.
ಹಿಂದೂ ಕಾನೂನಿನ ಪ್ರಾಚೀನ ಮೂಲಗಳನ್ನು ವಿವರಿಸಿ.
2. Marriage among Hindus is a "sacrament" and "not a contract", Discuss. Whether marriage in modern time is still considered to be a sacrament?
ಹಿಂದೂಗಳಲ್ಲಿ ವಿವಾಹವು ಒಂದು "ಸಂಸ್ಕಾರ" ಮತ್ತು "ಒಪ್ಪಂದವಲ್ಲ", ಚರ್ಚಿಸಿ. ಆಧುನಿಕ ಕಾಲದಲ್ಲಿ ವಿವಾಹವನ್ನು ಇನ್ನೂ ಸಂಸ್ಕಾರವೆಂದು ಪರಿಗಣಿಸಲಾಗಿದೆಯೇ?
3. Explain "Cruelty" as a ground for divorce under the Hindu Marriage Act, 1955.
ಹಿಂದೂ ವಿವಾಹ ಕಾಯ್ದೆ, 1955 ರ ಅಡಿಯಲ್ಲಿ ವಿಚ್ಛೇದನಕ್ಕೆ "ಕ್ರೌರ್ಯ" ಒಂದು ಆಧಾರವಾಗಿದೆ ಎಂಬುದನ್ನುವಿವರಿಸಿ.
4. What are endowments? Explain essentials of endowments.
ದತ್ತಿಗಳು ಎಂದರೇನು? ದತ್ತಿಗಳ ಅಗತ್ಯಗಳನ್ನು ವಿವರಿಸಿ.
5. Explain the important changes introduced by passing the Hindu Succession Act, 1956.
ಹಿಂದೂ ಉತ್ತರಾಧಿಕಾರ ಕಾಯ್ದೆ, 1956 ಅನ್ನು ಅಂಗೀಕರಿಸುವ ಮೂಲಕ ಪರಿಚಯಿಸಲಾದ ಪ್ರಮುಖ ಬದಲಾವಣೆಗಳನ್ನು ವಿವರಿಸಿ.
6. What are the principles of succession in the case a male Hindu dies intestate under Hindu Succession Act, 1956?
ಹಿಂದೂ ಉತ್ತರಾಧಿಕಾರಕಾಯ್ದೆ, 1956 ರ ಅಡಿಯಲ್ಲಿ ಮೃತ್ಯು ಪತ್ರವನ್ನ ಬರೆದಿಟ್ಟಿಲ್ಲದ ಹಿಂದೂ ಪುರುಷ ಮರಣ ಹೊಂದಿದ ಸಂದರ್ಭದಲ್ಲಿನ ಉತ್ತರಾಧಿಕಾರದ ತತ್ವಗಳು ಯಾವುವು?
7. Explain the capacity of female Hindu to take in adoption under Hindu Adoption and Maintaince Act 1956.
ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ 1956 ರ ಅಡಿಯಲ್ಲಿ ಹಿಂದೂ ಮಹಿಳೆಯರು ದತ್ತು ತೆಗೆದುಕೊಳ್ಳುವ ಸಾಮರ್ಥ್ಯವನ್ನು ವಿವರಿಸಿ.
8. Who are the persons capable of giving child in adoption and when the permission of court is necessary in this regard?
ಹಿಂದೂಗಳಲ್ಲಿ ಮಗುವನ್ನು ದತ್ತು ಪಡೆಯಲು ಸಮರ್ಥರಾದ ವ್ಯಕ್ತಿಗಳು ಯಾರು ಮತ್ತು ಈ ವಿಷಯದಲ್ಲಿ ನ್ಯಾಯಾಲಯದ ಅನುಮತಿ ಯಾವಾಗ ಅಗತ್ಯ?

**II. Answer any TWO of the following Questions** **2 X 10 = 20**

ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ

**9.** In 1986 Janak, a Hindu boy aged 20 years married Rekha aged 17 years in accordance with religious rites and ceremonies. In 1988 Janak married another girl Rita who is 19 years according to Hindu rituals. On being prosecuted for bigamy Janak contends that he was not liable for bigamy as his former marriage with Rekha was void ab initio. Decide with reference to case law on the subject.

1986 ರಲ್ಲಿ 20 ವರ್ಷದ ಹಿಂದೂ ಹುಡುಗ ಜನಕ್ 17 ವರ್ಷದ ರೇಖಾಳನ್ನು ಧಾರ್ಮಿಕ ವಿಧಿವಿಧಾನಗಳು ಮತ್ತು ವಿಧಿವಿಧಾನಗಳ ಪ್ರಕಾರ ವಿವಾಹವಾದರು. 1988 ರಲ್ಲಿ ಜನಕ್ 19 ವರ್ಷದ ರೀಟಾ ಎಂಬ ಮತ್ತೊಬ್ಬ ಹುಡುಗಿಯನ್ನು ಹಿಂದೂ ಆಚರಣೆಗಳ ಪ್ರಕಾರ ವಿವಾಹವಾದರು. ದ್ವಿಪತ್ನಿತ್ವಕ್ಕಾಗಿ ಮೊಕದ್ದಮೆ ಹೂಡಲ್ಪಟ್ಟಾಗ, ರೇಖಾಳೊಂದಿಗಿನ ತನ್ನ ಹಿಂದಿನ ವಿವಾಹವು ಅಮಾನ್ಯವಾಗಿರುವುದರಿಂದ ತಾನು ದ್ವಿಪತ್ನಿತ್ವಕ್ಕೆ ಹೊಣೆಗಾರನಲ್ಲ ಎಂದು ಜನಕ್ ವಾದಿಸುತ್ತಾರೆ. ಈ ವಿಷಯದ ಬಗ್ಗೆ ಪ್ರಕರಣದ ಕಾನೂನನ್ನು ಉಲ್ಲೇಖಿಸಿ ನಿರ್ಧರಿಸಿ.

**10.** A and his three sons, B, C and D constituted Mitaksharajoint family. B gets himself separated. Then A dies leaving behind the three sons and a widow W. B demands a share in the interest of A in the coparcenary property as well as his separate property. But other heirs refuse to give him. Decide.

A ಮತ್ತು ಅವನ ಮೂವರು ಗಂಡು ಮಕ್ಕಳಾದ B, C ಮತ್ತು D ಮಿತಾಕ್ಷರ ಅವಿಭಕ್ತ ಕುಟುಂಬದ ಭಾಗವಾಗಿದ್ದರು. B ಸ್ವತಃ ಬೇರ್ಪಡುತ್ತಾನೆ. ನಂತರ A ಮೂವರು ಗಂಡು ಮಕ್ಕಳನ್ನು ಮತ್ತು ವಿಧವೆ W ಯನ್ನು ಬಿಟ್ಟು ಸಾಯುತ್ತಾನೆ. B ತನ್ನ ಪ್ರತ್ಯೇಕ ಆಸ್ತಿಯ ಜೊತೆಗೆ A ಯ ಹಿತಾಸಕ್ತಿಯಲ್ಲಿ ಪಾಲನ್ನು ಕೇಳುತ್ತಾನೆ. ಆದರೆ ಇತರ ಉತ್ತರಾಧಿಕಾರಿಗಳು ಅವನಿಗೆ ನೀಡಲು ನಿರಾಕರಿಸುತ್ತಾರೆ. ನಿರ್ಧರಿಸಿ.

**11.** `K' a Hindu male marries `J' and a son `S' is born to them. The marriage is then declared null and void. Thereafter K adopts a son A to himself. Examine the validity of adoption and the rights if any of S and A in the property of K.

'ಕೆ' ಎಂಬ ಹಿಂದೂ ಪುರುಷ 'ಜೆ' ಅವರನ್ನು ಮದುವೆಯಾಗುತ್ತಾನೆ ಮತ್ತು ಅವರಿಗೆ 'ಎಸ್' ಎಂಬ ಮಗ ಜನಿಸುತ್ತಾನೆ. ನಂತರ ಮದುವೆಯನ್ನು ಶೂನ್ಯ ಮತ್ತು ಅನೂರ್ಜಿತವೆಂದು ಘೋಷಿಸಲಾಗುತ್ತದೆ. ನಂತರ 'ಕೆ' ತನಗೆ 'ಎ' ಎಂಬ ಮಗನನ್ನು ದತ್ತು ತೆಗೆದುಕೊಳ್ಳುತ್ತಾನೆ. ದತ್ತು ಸ್ವೀಕಾರದ ಸಿಂಧುತ್ವ ಮತ್ತು 'ಕೆ' ಅವರ ಆಸ್ತಿಯಲ್ಲಿ 'ಎಸ್' ಮತ್ತು 'ಎ' ಗಳಲ್ಲಿ ಯಾವುದಾದರೂ ಇದ್ದರೆ ಹಕ್ಕುಗಳನ್ನು ಪರೀಕ್ಷಿಸಿ.

# BLDE (DEEMED TO BE UNIVERSITY)

## I SEMESTER of 3 Year LL.B EXAMINATION

## Family Law-I: Hindu Law

## QP CODE: 114

**Duration: 3 Hours** **Max. Marks: 80**

## Instructions to the Candidates:

- Answers should be written either in English or Kannada completely.

**I. Answer any FIVE of the following Questions.** **5X12=60**

ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.

1. Explain in brief about the sources of Hindu law.
   ಹಿಂದೂ ಕಾನೂನಿನ ಮೂಲಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.
2. Explain the types of marriages under the Hindu Marriage Act, 1955?
   ಹಿಂದೂ ವಿವಾಹ ಕಾಯ್ದೆ, 1955 ರ ಅಡಿಯಲ್ಲಿ ವಿವಾಹಗಳ ಪ್ರಕಾರಗಳನ್ನು ವಿವರಿಸಿ?
3. Explain the term "Desertion" and "Cruelty "as ground of divorce under Hindu Marriage Act, 1955.
   ಹಿಂದೂ ವಿವಾಹ ಕಾಯ್ದೆ, 1955 ರ ಅಡಿಯಲ್ಲಿ ವಿಚ್ಛೇದನಕ್ಕೆ ಕಾರಣವಾದ "ತೊರೆದು ಹೋಗುವುದು" ಮತ್ತು "ಕ್ರೌರ್ಯ" ಎಂಬ ಪದಗಳನ್ನು ವಿವರಿಸಿ.
4. What is the status and role of Karta in a Joint Hindu family? Describe.
   ಅವಿಭಕ್ತ ಹಿಂದೂ ಕುಟುಂಬದಲ್ಲಿ ಕರ್ತನ ಸ್ಥಾನಮಾನ ಮತ್ತು ಪಾತ್ರವೇನು? ವಿವರಿಸಿ.
5. Explain, who has the right to open the partition and who are entitled to share in partition of a Joint Hindu Family.
   ಅವಿಭಕ್ತ ಹಿಂದೂ ಕುಟುಂಬದ ವಿಭಜನೆಯನ್ನು ತೆರೆಯುವ ಹಕ್ಕು ಯಾರಿಗೆ ಇದೆ ಮತ್ತು ವಿಭಜನೆಯಲ್ಲಿ ಪಾಲು ಪಡೆಯಲು ಯಾರು ಅರ್ಹರು, ವಿವರಿಸಿ.
6. Describe the rules as to the succession of a female Hindu intestate in Hindu Succession Act, 1956.
   ಹಿಂದೂ ಉತ್ತರಾಧಿಕಾರ ಕಾಯ್ದೆ, 1956 ರಲ್ಲಿಹಿಂದೂ ಮಹಿಳೆಯ ಉತ್ತರಾಧಿಕಾರದ ನಿಯಮಗಳನ್ನು ವಿವರಿಸಿ.
7. Who may be adopted and explain the effects of adoption under the Hindu Adoptions and Maintenance Act, 1956.
   ಹಿಂದೂ ದತ್ತು ಸ್ವೀಕಾರ ಮತ್ತು ನಿರ್ವಹಣಾ ಕಾಯ್ದೆ, 1956 ರ ಅಡಿಯಲ್ಲಿ ಯಾರನ್ನು ದತ್ತು ಪಡೆಯ ಬಹುದು ಮತ್ತು ದತ್ತು ಸ್ವೀಕಾರದ ಪರಿಣಾಮಗಳನ್ನು ವಿವರಿಸಿ.
8. Who are the Natural Guardians of a Hindu minor and what are their powers?
   ಹಿಂದೂ ಅಪ್ರಾಪ್ತ ವಯಸ್ಕನ ನೈಸರ್ಗಿಕ ರಕ್ಷಕರು ಯಾರು ಮತ್ತು ಅವರ ಅಧಿಕಾರಗಳೇನು?

## II. Answer any TWO of the following Questions. 2X10=20

ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ

9. 'A' dies intestate leaving behind his two wives 'Y' & 'X' and two daughters 'M' and 'N' and one son 'J' and mother 'K'. Distribute his property.
'A' ತನ್ನ ಇಬ್ಬರು ಹೆಂಡತಿಯರು 'Y' & 'X' ಮತ್ತು ಇಬ್ಬರು ಹೆಣ್ಣು ಮಕ್ಕಳು 'M' ಮತ್ತು 'N' ಮತ್ತು ಒಬ್ಬ ಮಗ 'J' ಮತ್ತು ತಾಯಿ 'K' ರನ್ನುಬಿಟ್ಟು ಉಯಿಲು ಬರೆಯದೆ ಮರಣ ಹೊಂದುತ್ತಾನೆ. ಅವನ ಆಸ್ತಿಯನ್ನು ಹಂಚಿ ಕೊಡಿ.

10. The immoveable property of a Hindu minor is sold by the father for the benefit of the minor without the permission of the court. Is the sale valid? Give the reasons.
ನ್ಯಾಯಾಲಯದ ಅನುಮತಿಯಿಲ್ಲದೆ ಹಿಂದೂ ಅಪ್ರಾಪ್ತ ವಯಸ್ಕನ ಸ್ಥಿರಆಸ್ತಿಯನ್ನು ತಂದೆ ಅಪ್ರಾಪ್ತನ ಲಾಭಕ್ಕಾಗಿ ಮಾರಾಟ ಮಾಡುತ್ತಾರೆ. ಈ ಮಾರಾಟವು ಮಾನ್ಯವಾಗಿದೆಯೇ? ಕಾರಣಗಳನ್ನು ನೀಡಿ.

11. 'A' adopts 'B', who is already adopted by 'C'. Is this adoption valid?
'A'ಯು 'B' ನನ್ನು ದತ್ತು ಸ್ವೀಕರಿಸಲು ಬಯಸುತ್ತಾನೆ, ಆದರೆ 'B' ನನ್ನು'C' ಈಗಾಗಲೇ ದತ್ತು ಸ್ವೀಕರಿಸಿದ್ದಾನೆ. ಈ ದತ್ತು ಮಾನ್ಯವಾಗಬಹುದೇ?

# BLDE (DEEMED TO BE UNIVERSITY)

## I SEMESTER 3 Year LL.B EXAMINATION, MARCH – 2025

## Criminal Law I: Bharatiya Nyaya Sanhita, 2023

## QP CODE: 115

**Duration: 3 Hours** **Max. Marks: 80**

### Instructions to the Candidates:

- Answers should be written either in English or Kannada completely.

**I. Answer any FIVE of the following Questions.** **5 X 12 = 60**
ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.

1. Explain the variations of liability in crime.
ಅಪರಾಧದಲ್ಲಿನ ಹೊಣೆಗಾರಿಕೆಯ ಬದಲಾವಣೆಗಳನ್ನು ವಿವರಿಸಿ.
2. What are the general exceptions under Bhartiya Nyaya Sanhita, 2023.
ಭಾರತೀಯ ನ್ಯಾಯ ಸಂಹಿತ, 2023 ನಲ್ಲಿ ಉಲ್ಲೇಖಿಸಿದ ಸಾಮಾನ್ಯ ಅಪವಾದಗಳನ್ನು ವಿವರಿಸಿ.
3. Explain the law relating to abetment and criminal conspiracy under Bhartiya Nyaya Sanhita, 2023.
ಭಾರತೀಯ ನ್ಯಾಯ ಸಂಹಿತೆ, 2023 ರಲ್ಲಿ ಬರುವ ದುಷ್ಪ್ರೇರಣೆಗೆ ಸಂಬಂಧಿಸಿದ ಮತ್ತು ಅಪರಾಧಿಕ ಒಳ ಸಂಚಿಗೆ ಸಂಬಂಧಿಸಿದ ಕಾನೂನನ್ನು ವಿವರಿಸಿರಿ.
4. Define rape. Discuss its ingredients with case laws.
ಅತ್ಯಾಚಾರ (ಹಠ ಸಂಭೋಗ) ವನ್ನು ವ್ಯಾಖ್ಯಾನಿಸಿ. ಇದರ ಮುಖ್ಯ ಅಂಶಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.
5. What is culpable homicide? Explain the circumstances under which culpable homicide amounts to murder.
ಅಪರಾಧಿಕ ನರಹತ್ಯೆ ಎಂದರೇನು? ಅಪರಾಧಿಕ ನರಹತ್ಯೆ ಯಾವ ಸಂದರ್ಭಗಳಲ್ಲಿ ಕೊಲೆಯಾಗುತ್ತದೆ ಎಂಬುದನ್ನು ವಿವರಿಸಿ.
6. Explain the provisions relating to Offences against the public tranquility.
ಸಾರ್ವಜನಿಕ ನೆಮ್ಮದಿಗೆ ಭಂಗ ತರುವ ಅಪರಾಧಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿ.
7. What is kidnapping? Distinguish it from abduction.
ವ್ಯಪಹರಣ ಎಂದರೇನು? ಇದನ್ನು ಅಪಹರಣದಿಂದ ಪ್ರತ್ಯೇಕಿಸಿ.
8. Define Robbery. Distinguish Robbery from Dacoity.
ಸುಲಿಗೆಯನ್ನು ವ್ಯಾಖ್ಯಾನಿಸಿ. ಸುಲಿಗೆಯನ್ನು ದರೋಡೆಯಿಂದ ವ್ಯತ್ಯಾಸಿಸಿ

**II.** Answer any two of the following Questions. **2 X 10 = 20**
ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.

9. ‘ A' intending to permanently disfigure B's face gives 'B' a blow which does not permanently disfigure B's face, but causes 'B' to suffer a severe bodily pain for 20 days. Discuss the liability of 'A'.

'ಅ'ನು ‘ಬ' ನ ಮುಖವನ್ನು ಶಾಶ್ವತವಾಗಿ ವಿರೂಪಗೊಳಿಸುವ ಉದ್ದೇಶದಿಂದ 'ಬ' ನಿಗೆ ಒಂದು ಏಟನ್ನು ಹೊಡೆಯುತ್ತಾನೆ. ಅದರಿಂದ 'ಬ' ನ ಮುಖವು ವಿರೂಪಗೊಳ್ಳುವುದಿಲ್ಲ. ಆದರೆ 'ಬ' ನು 20 ದಿನಗಳ ಕಾಲ ತೀವ್ರವಾದ ದೈಹಿಕ ನೋವನ್ನು ಅನುಭವಿಸಬೇಕಾಗುತ್ತದೆ. ‘ಅ’ ನ ಹೊಣೆಗಾರಿಕೆಯನ್ನು ಚರ್ಚಿಸಿರಿ.

**10.** A shakes his fist at Z intending or knowing it to be likely that he may there by cause Z to believe that A is about to strike Z. which offence has A committed?

A ಯು Z ಗೆ ಹೊಡೆಯುವೆನೆಂಬ ನಂಬಿಕೆ ಉಂಟು ಮಾಡುವ ಉದ್ದೇಶದಿಂದ ಅಥವಾ ಅವನು ಹಾಗೆ ನಂಬುವ ಸಂಭವವಿದೆ ಎಂದು ತಿಳಿದು A ಯು Z ಗೆ ತನ್ನ ಮುಷ್ಟಿಯನ್ನು ಪ್ರದರ್ಶಿಸುತ್ತಾನೆ. ಇಲ್ಲಿ A ಯು ಯಾವ ಅಪರಾಧವನ್ನು ಮಾಡಿದ್ದಾನೆ?

**11.** 'A' threatens to publish a defamatory libel concerning 'B' unless 'B' gives him money. Whether 'A' has committed any offence?

'ಅ' ನು ಮಾನಹಾನಿಕರ ಲೇಖನವನ್ನು 'ಬ' ನ ಬಗ್ಗೆ ಪ್ರಕಟಿಸುವುದಾಗಿ ಹೆದರಿಸುತ್ತಾನೆ. ಹೀಗೆ ಅವನು ತನಗೆ ಹಣ ಕೊಡುವಂತೆ 'ಬ' ನನ್ನು ಪ್ರೇರೇಪಿಸುತ್ತಾನೆ. 'ಅ' ನು ಯಾವುದಾದರೂ ಅಪರಾಧ ಮಾಡಿದ್ದಾನೆಯೇ?